ನೀರಿನ ತೊಂದರೆ

311(373); ಶ್ರೀ ಡಾ॥ ಮಾಲಕರೆಡ್ಡಿ ಎ ಬಿ (ಯಾದಗಿರಿ)

ಅ) ಯಾದಗಿರಿ ವಿಧಾನಸಭಾ ಕ್ಷೇತ್ರದ ವಡಗೇರಾ ಮತ್ತು ವಡಗೇರಾ ಕೇಂದ್ರಿತ ಗ್ರಾಮಗಳಿಗೆ ಕುಡಿಯುವ ನೀರಿನ ತೊಂದರೆ ಇರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ವಡಗೇರಾ ಕೇಂದ್ರಿತ ವಡಗೇರಾ, ಕಂದಳ್ಳಿ ಕೋನಳ್ಳಿ, ಬಿಳ್ಹಾರ ಸೇರಿದಂತೆ ಹಲವಾರು ಗ್ರಾಮಗಳಿಗೆ ಕುಡಿಯುವ ನೀರು ಪೂರೈಸುವ ಯೋಜನೆ ಸಿದ್ಧವಾಗಿದ್ದರೂ ಈ ಯೋಜನೆ ಸರಿಯಾಗಿ ಕಾರ್ಯಗತವಾಗದೇ ಸಮರ್ಪಕ ನೀರು ಪೂರೈಕೆಯಾಗದಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ,

ಇ) ನೀರಿನ ತೊಂದರೆ ಇದ್ದರೂ ಈ ಯೋಜನೆ ಸರಿಯಾಗಿ ಕಾರ್ಯಗತವಾಗದಿರಲು ಕಾರಣಗಳೇನು, ಯೋಜನೆ ಪೂರ್ಣಗೊಂಡು ಮೂರುವರೆ ವರ್ಷಗಳೇ ಕಳೆದರೂ ಸರ್ಕಾರ ಈ ಯೋಜನೆಯ ಸಮರ್ಪಕ ಅನುಷ್ಠಾನ ಮಾಡದೇ ಇರಲು ಕಾರಣಗಳೇನು,

ಈ) ಈ ಯೋಜನೆಯ ಸಮರ್ಪಕ ಅನುಷ್ಠಾನ ಹಾಗೂ ಗುಣಮಟ್ಟದ ನೀರಿನ ಪೂರೈಕೆಗೆ ಸರ್ಕಾರ ಕೈಗೊಳ್ಳಲಿರುವ ಕ್ರಮಗಳೇನು ?

ಶ್ರೀ ಹೆಚ್ ಕೆ ಪಾಟೀಲ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ಯ ಸಚಿವರು)

ಅ) ರಹಾಪುರ ತಾಲ್ಲೂಕಿನ ವಡಗೇರಾ ಮತ್ತು ವಡಗೇರಾ ಕೇಂದ್ರಿತ ಗ್ರಾಮಗಳ ನೀರಿನ ಸಮಸ್ಯೆಯನ್ನು ಬಗೆಹರಿಸಲು ಬಹುಗ್ರಾಮ ಕುಡಿಯುವ ನೀರು ಸರಬರಾಜು ಯೋಜನೆ, ಹಾಗೂ ಆಸುಪಾಸಿನ ಗ್ರಾಮಗಳಿಗೆ ನಳ ನೀರು ಹಾಗೂ ಕಿರು ನೀರು ಸರಬರಾಜು ಯೋಜನೆ ನಿರ್ಮಿಸಿ ನೀರು ಸರಬರಾಜು ವ್ಯವಸ್ಥೆ ಕಲ್ಪಿಸಲಾಗಿದೆ

ಆ) ವಡಗೇರಾ ಮತ್ತು ಇತರ 2 ಗ್ರಾಮ (ಕಂದಳ್ಳಿ ಮತ್ತು ಕೋನಳ್ಳಿ)ಗಳ ಬಹು ಗ್ರಾಮ ಕುಡಿಯುವ ನೀರು ಸರಬರಾಜು ಯೋಜನೆಯನ್ನು ಈಗಾಗಲೇ ಪೂರ್ಣಗೊಳಿಸಿ ಕಾರ್ಯಗತ ಗೊಳಿಸಿದ್ದು 3 ಗ್ರಾಮಗಳಿಗೆ ಸಮರ್ಪಕ ನೀರು ಪೂರೈಸಲಾಗುತ್ತಿದೆ ಸದರಿ ಯೋಜನೆಯಿಂದ 3 ಗ್ರಾಮಗಳಿಗೆ ಮಾತ್ರ ತಾಂತ್ರಿಕವಾಗಿ ವಿನ್ಯಾಸಗೊಳಿಸಿದಂತೆ ಕಾಮಗಾರಿ ಪೂರ್ಣಗೊಳಿಸಿ ಕಾರ್ಯಗತಗೊಳಿಸಲಾಗಿದೆ ಸಾರ್ವಜನಿಕರ ಕೋರಿಕೆಯಂತೆ ಬಿಳ್ಹಾರ ಗ್ರಾಮಕ್ಕೆ ನೀರು ಸರಬರಾಜು ಮಾಡುವ ಬಗ್ಗೆ ತಾಂತ್ರಿಕವಾಗಿ ಪರಿಶೀಲಿಸಲಾಗುತ್ತಿದೆ. ಈಗ ಬಿಳ್ಹಾರ ಗ್ರಾಮದಲ್ಲಿ ಒಂದು ನಳ ನೀರು ಮತ್ತು ಕಿರು ನೀರು ಹಾಗೂ ಕೈಪಂಪುಗಳು ಕಾರ್ಯನಿರ್ವಹಿಸುತ್ತಿದ್ದು, ಸಧ್ಯದಲ್ಲಿ ನೀರಿನ ಸಮಸ್ಯ ಇರುವುದಿಲ್ಲ

ಇ) **ಮತ್ತು ಈ**) ಈ ಯೋಜನೆಯು ಸಮರ್ಪಕವಾಗಿ ಕಾರ್ಯನಿರ್ವಹಿಸುತ್ತಿದ್ದು, ಯೋಜನಾ ವ್ಯಾಪ್ತಿಯ ಮೂರು ಗ್ರಾಮಗಳಿಗೂ ಶುದ್ಧ ಕುಡಿಯುವ ನೀರು ಸರಬರಾಜಾಗುತ್ತಿದೆ

ಕಾಯಕ ಬಂಧುಗಳಿಗೆ ಗೌರವಧನ ನೀಡದೇ ಇರುವುದು

438(508); ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಶಿರಸಿ)

ಅ) ಎಮ್ ಜಿ.ಎನ್.ಆರ್ ಜಿ. ಯೋಜನೆಯಡಿಯಲ್ಲಿ ಕಾಯಕ ಬಂಧುಗಳಿಗೆ ಗೌರವಧನ ನೀಡದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಹೆಚ್.ಕೆ. ಪಾಟೀಲ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)

ಅ) ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿಯಲ್ಲಿ ಕಾಯಕ ಬಂಧುಗಳಿಗೆ ಗೌರವಧನವನ್ನು ನೀಡುವ ಅವಕಾಶ ಇರುವುದಿಲ್ಲ.

ಆದರೆ ಕಾಯಕ ಬಂಧುಗಳ ಸಂಭಾವನೆಯನ್ನು ದಿನವೊಂದಕ್ಕೆ ಪಂಚಾಯತ್ ರಾಜ್ ಇಂಜನೀಯರಿಂಗ್ ಇಲಾಖೆಯ ಅಡಿ